ಉಡುಪಿ ಜಿಲ್ಲಾ ಪಂಚಾಯತ್ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿ ಉಡುಪಿ

ಸಂ:ಎ1:ಜೇ.ಪ:01:2018-19 ದಿನಾಂಕ: 26-03-2019

01-01-1995 ರಿಂದ 31-12-2018 ರ ಅವಧಿಗೆ ಸಂಬಂಧಿಸಿ ಪ್ರೌಢಶಾಲಾ ಸಹ ಶಿಕ್ಷಕರುಗಳ ಜೇಷ್ಠತಾ ಪಟ್ಟಿ ಪ್ರಕಟಿಸಲಾಗಿದ್ದು ಇದರಲ್ಲಿ ತಿದ್ದುಪಡಿಗಳಿಗಾಗಿ ಸೂಚನೆ ಈ ಕೆಳಗಿನಂತೆ ನೀಡಿದೆ.

1. ಆಯುಕ್ತರ ಕಛೇರಿಯಿಂದ ನೀಡಲ್ಪಟ್ಟ ಮಾಹಿತಿಯಿಂದ ಈ ಜೇಷ್ಠತಾ ಪಟ್ಟಿ ಸಿದ್ಧಪಡಿಸಲಾಗಿದೆ.
2. ದಿನಾಂಕ: 01-01-1995 ರಿಂದ 31-12-2018 ರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಶಿಕ್ಷಕರುಗಳ ಜೇಷ್ಠತಾ ಪಟ್ಟಿಯಾಗಿರುತ್ತದೆ.
3. ಈ ಜೇಷ್ಠತಾ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿರುವ / ಹೆಸರುಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ಶಿಕ್ಷಕರುಗಳು ತಮ್ಮ ಹೆಸರನ್ನು ಜೇಷ್ಠತಾ ಪಟ್ಟಿಯಲ್ಲಿರುವಂತೆ ನಿಗಧಿತ ಕಾಲಂ ನಲ್ಲಿ ಪೂರ್ಣವಾಗಿ ಭರ್ತಿಗೊಳಿಸಿ ಒಂದು ಶಾಲೆಯಿಂದ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಷರಾ ಕಾಲಂ ನಲ್ಲಿ ಸದ್ರಿ ಶಿಕ್ಷಕರ ಸಹಿ ಪಡೆದು ಸಾಫ್ಟ್ ಮತ್ತು ಹಾರ್ಡ್ ಪ್ರತಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಶಾಲಾ ಮುಖ್ಯಸ್ಥರು ದಿನಾಂಕ: 10-04-2019 ರ ಒಳಗಾಗಿ ನೀಡುವುದು.
4. ಅನ್ಯ ವಿಭಾಗಗಳಿಂದ ವರ್ಗಾವಣೆಯಾಗಿ ಬಂದಿದ್ದಲ್ಲಿ ಈ ವಿಭಾಗಕ್ಕೆ ಬಂದ ದಿನಾಂಕ ಮತ್ತು ಯಾವ ವಿಭಾಗದಿಂದ ಬಂದ ಬಗ್ಗೆ ಮಾಹಿತಿಯನ್ನು ಷರಾ ಕಾಲಂ ನಲ್ಲಿ ಒದಗಿಸುವುದು.
5. ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಪಟ್ಟಿಯನ್ನು ಕ್ರೋಢಿಕರಿಸಿ ಸಾಫ್ಟ್ ಮತ್ತು ಹಾರ್ಡ್ ಪ್ರತಿಯಲ್ಲಿ ದಿನಾಂಕ: 15-04-2019 ರ ಒಳಗಾಗಿ ಈ ಕಛೇರಿಗೆ ಒಪ್ಪಿಸುವುದು.

27/03/19

**ಉಪನಿರ್ದೇಶಕರು (ಆಡಳಿತ)**
ಸಾರ್ವಜನಿಕ ಶಿಕ್ಷಣ ಇಲಾಖೆ
ರಜತಾದ್ರಿ, ಉಡುಪಿ ಜಿಲ್ಲೆ-576 104

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ4(2):ಪ್ರೌಶಾಶಿ ಸಶಿಜೇಪ:37/2018-19

ದಿನಾಂಕ:18/03/2019

-ಜ್ಞಾಪನ-

ವಿಷಯ: ಬೆಂಗಳೂರು ಮತ್ತು ಮೈಸೂರು ವಿಭಾಗದ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಆಯ್ಕೆ ಪಟ್ಟಿಯಲ್ಲಿರುವ ಮೆರಿಟ್ ಲಿಸ್ಟ್ ಸಂಖ್ಯೆಯನ್ನು ಪರಿಗಣಿಸಿ ಜೇಷ್ಠತಾ ಪಟ್ಟಿಯನ್ನು 31/12/2018ರಲ್ಲಿದಂತೆ ಪರಿಷ್ಕರಿಸುವ ಕುರಿತು.

ಉಲ್ಲೇಖ: ಈ ಕಛೇರಿ ಅಧಿಸೂಚನೆ ಸಂಖ್ಯೆ: ಸಿ4(2):ಪ್ರೌಶಾಶಿ ಸಶಿಜೇಪ:10/2018-19 ದಿನಾಂಕ:20.04.2018.

-----****-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಪನಿರ್ದೇಶಕರು (ಆಡಳಿತ)ರವರ ವರದಿಯನ್ವಯ ತಾತ್ಕಾಲಿಕಾ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2018ರಲ್ಲಿದ್ದಂತೆ ತಮ್ಮ ಕಛೇರಿಯ ಇ-ಮೇಲ್ ವಿಳಾಸಕ್ಕೆ ಪಿ.ಡಿ.ಎಫ್ ಮೂಲಕ ಕಳುಹಿಸಿದ್ದು ಈ ಬಗ್ಗೆ ಶಿಕ್ಷಕರುಗಳಿಂದ ಆಕ್ಷೇಪಣೆಗಳನ್ನು ಪರಿಗಣಿಸಿ 31/12/1994ರ ವರೆಗಿನ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಭಾಗ-1 ಎಂದು ಪರಿಗಣಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಪ್ರಸ್ತುತ ಭಾಗ-2ನ್ನು 01/01/1995 ರಿಂದ 31/12/2018 ರ ವರೆಗೆ ಸಿದ್ಧಪಡಿಸಬೇಕಾಗಿರುವುದರಿಂದ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಗೊಂಡಿರುವ ಪಟ್ಟಿಯನ್ನು ಡೌನ್ಲೋಡ್ ಮಾಡಿಕೊಂಡು ಪಟ್ಟಿಯಲ್ಲಿ ತಿದ್ದುಪಡಿ ಅವಶ್ಯಕವಿದ್ದಲ್ಲಿ ತಿದ್ದುಪಡಿ ಮಾಡಿ ಪ್ರಸ್ತುತ ಸರ್ಕಾರ ಹೊರಡಿಸಿರುವ ಆದೇಶಗಳನ್ವಯ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಉಪನಿರ್ದೇಶಕರ(ಆಡಳಿತ)ರವರ ಸಹಿಯೊಂದಿಗೆ ಹಾಗೂ ಹೊಸದಾಗಿ ಸೇರ್ಪಡೆ ಮಾಡಬೇಕಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ, ತಮ್ಮ ಕಛೇರಿಯಲ್ಲಿ ನೇಮಕಾತಿ/ಬಡ್ತಿಗೆ ಸಂಬಂಧಿಸಿದ ನೋಡೆಲ್ ಅಧಿಕಾರಿಗಳು ಸಂಬಂಧಿಸಿದ ಅಧೀಕ್ಷಕರು, ಮತ್ತು ವಿಷಯ ನಿರ್ವಾಹಕರು ಕೆಳಕಂಡಂತೆ ನಿಗಧಿಪಡಿಸಿರುವ ದಿನಾಂಕಗಳಂದು ಈ ಕಛೇರಿಗೆ ಹಾಜರಾಗಿ ಜೇಷ್ಠತಾ ಪಟ್ಟಿಯ ತಿದ್ದುಪಡಿ ಮಾಡಲು ತಿಳಿಸಿದೆ, ಹಾಗೂ ತಪ್ಪಿದ್ದಲ್ಲಿ ಮುಂದಿನ ಅವಘಡಗಳಿಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರನ್ನೆ ಪೂರ್ಣ ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಜಿಲ್ಲಾ ಹಂತದಲ್ಲಿ ದಿನಾಂಕ:20/03/2019 ರಂದು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಪಡೆದು ದಿನಾಂಕ:23/03/2019 ರಂದು ಜಿಲ್ಲಾ ಹಂತದಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವುದು. (ಪಿ.ಡಿ.ಎಫ್ ಪ್ರತಿಯನ್ನು ಎಲ್ಲಾ ಇ-ಮೇಲ್ ವಿಳಾಸಕ್ಕೆ ಕಳುಹಿಸಿದೆ.)

| ಕ್ರಸಂ | ಜಿಲ್ಲೆ | ಹಾಜರಾಗಬೇಕಾದ ದಿನಾಂಕ ಮತ್ತು ಸಮಯ |
|---|---|---|
| 1. | ರಾಮನಗರ | ದಿನಾಂಕ: 25.03.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 2. | ಕೋಲಾರ | ದಿನಾಂಕ: 26.03.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 3 | ಚಿಕ್ಕಬಳ್ಳಾಪುರ | ದಿನಾಂಕ: 27.03.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 4 | ತುಮಕೂರು | ದಿನಾಂಕ: 28.03.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 5. | ಮಧುಗಿರಿ | ದಿನಾಂಕ: 29.03.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 6. | ಶಿವಮೊಗ್ಗ | ದಿನಾಂಕ: 30.03.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 7. | ಚಿತ್ರದುರ್ಗ | ದಿನಾಂಕ: 01.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 8.. | ದಾವಣಗೆರೆ | ದಿನಾಂಕ: 02.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 9 | ಮೈಸೂರು | ದಿನಾಂಕ: 03.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 10 | ಚಾಮರಾಜನಗರ | ದಿನಾಂಕ: 04.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 11 | ಮಂಡ್ಯ | ದಿನಾಂಕ: 08.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |



Scanned by CamScanner

| | | |
|---|---|---|
| 12 | ಹಾಸನ | ದಿನಾಂಕ: 09.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 13 | ಚಿಕ್ಕಮಗಳೂರು | ದಿನಾಂಕ: 10.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 14 | ಕೊಡಗು | ದಿನಾಂಕ: 11.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 15 | ದಕ್ಷಿಣ ಕನ್ನಡ | ದಿನಾಂಕ: 22.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 16 | ಉಡುಪಿ | ದಿನಾಂಕ: 23.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 17 | ಬೆಂಗಳೂರು ದಕ್ಷಿಣ | ದಿನಾಂಕ: 24.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 18 | ಬೆಂಗಳೂರು ಉತ್ತರ | ದಿನಾಂಕ: 25.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |
| 19 | ಬೆಂಗಳೂರು ಗ್ರಾಮಾಂತರ | ದಿನಾಂಕ: 26.04.2019 ಸಮಯ 10.30 ರಿಂದ ಸಂಜೆ 5ರ ವರೆಗೆ |

ನಿರ್ದೇಶಕರು (ಪ್ರೌಢಶಿಕ್ಷಣ)

ಗೆ,

1) ವಿಭಾಗೀಯ ಸಹನಿರ್ದೇಶಕರು ಬೆಂಗಳೂರು/ ಮೈಸೂರು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಕಳುಹಿಸುತ್ತಾ ತಮ್ಮ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ನಿಗದಿತ ದಿನಾಂಕದಂದು ಈ ಕಛೇರಿಗೆ ಕಡ್ಡಾಯವಾಗಿ ಹಾಜರಾಗುವಂತೆ ತಿಳಿಸಲು ಸೂಚಿಸಿದೆ.
2) ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ನಿಗದಿತ ದಿನಾಂಕದಂದು ಕಡ್ಡಾಯವಾಗಿ ತಮ್ಮ ಸಿಬ್ಬಂದಿಯವರು ಪೂರಕ ದಾಖಲೆಗಳೊಂದಿಗೆ ಹಾಜರಾಗುವಂತೆ ತಿಳಿಸುವುದು.
3) ಕಛೇರಿ ಪ್ರತಿ.

Scanned by CamScanner